ದಿನಾಂಕಃ 06.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ **3**ನೇ ಪ್ರತಿವಾದಿ ಪರ ಶ್ರೀ ಪಿಯು ವಕೀಲರಿಂದಃ

ನೀವು 4ನೇ ಪ್ರತಿವಾದಿ ರಾಜರಾಜೇಶ್ವರಿ ಬಿಲ್ಡ್ ಕಾನ್ ಜೊತೆಯಲ್ಲಿ ಜೆ ಡಿ ಎ ಮಾಡಿಕೊಂಡಿದ್ದೀರಿ ಎಂದರೆ ಸರಿ . ಅಭಿವೃದ್ಧಿ ಆದ ನಂತರ ಯು ಡಿ ಎಸ್ ನಲ್ಲಿ ನಿಮ್ಮ ಷೇರು ಶೇಕಡ 55 ರಂತೆ ಮತ್ತು ಡೆವಲಪರ್ ಗೆ ಶೇಕಡ 45 ರಂತೆ ಇತ್ತು ಎಂದರೆ ಸರಿ . ಅದೇ ರೀತಿ ಎಸ್ ಬಿ ಎ ದಲ್ಲೂ ಸಹ ನಿಮ್ಮ ಷೇರು ಶೇಕಡ 55 ರಂತೆ ಮತ್ತು ಡೆವಲಪರ್ ಗೆ ಶೇಕಡ 45 ರಂತೆ ಇತ್ತು ಎಂದರೆ ಸರಿ . ಅದಾದ ನಂತರ 4ನೇ ಪ್ರತಿವಾದಿಯವರಿಗೆ ನೀವು ಜಿಪಿಎ ಮಾಡಿಕೊಟ್ಟಿದ್ದೀರಿ ಎಂದರೆ ನಾನು 4ನೇ ಪ್ರತಿವಾದಿ ರಾಜರಾಜೇಶ್ವರಿ ಬಿಲ್ಡ್ ಕಾನ್ ರವರಿಗೆ ಜಿಪಿಎ ಕೊಟ್ಟಿರಲಿಲ್ಲ ರಮಣ್ ಲಾಲ್ ಎಂ ಪಾ ಗೆ ಜಿಪಿಎ ಕೊಟ್ಟಿದ್ದೆ . ನೀವು ರಮಣ್ ಲಾಲ್ ಎಂ ಪಾ ರವರು ಡೆರೆಕ್ಟರ್ ಆಫ್ ರಾಜರಾಜೇಶ್ವರಿ ಬಿಲ್ಡ್ ಕಾನ್ ಪ್ರೈ ಲಿ., ಕೆಪಾಸಿಟಿಯಲ್ಲಿ ಅವರಿಗೆ ಜಿ ಪಿಎ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ ರಮಣ್ ಲಾಲ್ ಎಂ ಪಾ ರವರಿಗೆ Individual capacity ಮೇಲೆ ಜಿಪಿ ಎ ಕೊಟ್ಟಿದ್ದೀರಿ . ನೀವು ಹಾಜರುಪಡಿಸಿರುವ ಜಿಪಿಎ ನಿಪಿ 2 ರಲ್ಲಿ ರಮಣ್ ಲಾಲ್ ಎಂ ಪಾ

ರವರು ಸಹಿ ಮಾಡಿರುವ ಕಡೆ ಪುಟದಲ್ಲಿ ಡೆರೆಕ್ಟರ್ ರಾಜರಾಜೇಶ್ವರಿ ಬಿಲ್ಡ್ ಕಾನ್ ಪ್ರೈ ಲಿ ., ಎಂದು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದು ಜೆಡಿಎ ರಮಣ್ ಲಾಲ್ ಎಂ ಷಾ ರವರು ಮಾಡಿದ ಸಹಿ ಅದು ಹೇಗೆ ಬಂತು ಪುಟ 9 ರಲ್ಲಿ ಬಂದು ಸೇರಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ 1 ಜೆಡಿಎ ಮತ್ತು ನಿಪಿ 2 ಜಿಪಿಎ ನೋಂದಣಿಯಾಗಿರುವಂತಹ ದಾಖಲೆಗಳು ಎಂದರೆ ಸರಿ . ಎರಡು ದಾಖಲೆಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೀರಿ ಎಂದರೆ ಸರಿ . ಸಾಕ್ಷಿ ಮುಂದುವರೆದು ಎರಡು ದಾಖಲೆಗಳನ್ನು ಪ್ರೆಸೆಂಟ್ ಮಾಡಿದವರು 4 ನೇ ಪ್ರತಿವಾದಿ ರಾಜರಾಜೇಶ್ವರಿ ಬಿಲ್ಡ್ ಕಾನ್ ರವರು . ನಿಪಿ 1 ಜೆಡಿಎ ದಲ್ಲಿ ಕರಾರಿಗೆ ಸಂಬಂಧಿಸಿದ ಯಾವುದೇ ತಕರಾರುಗಳು ಬಂದರೂ ಅದನ್ನು ಮಾನ್ಯ Arbitrator ಮುಂದೆ ಪರಿಹರಿಸಿಕೊಡುತ್ತೇವೆ ಎಂದು ಒಪ್ಪಿ ದ್ದೀರಿ ಎಂದರೆ ಸರಿ . ಸಾಕ್ಷಿ ಮುಂದುವರೆದು ಆ ಬಗ್ಗೆ ನಾನು ಮಾನ್ಯ Arbitrator ಮುಂದೆ ಅರ್ಜಿಹಾಕಿದ್ದೇನೆ ಅದರಲ್ಲಿ ಈ ನಾಲ್ಕು ಜನ ಪ್ರತಿವಾದಿಗಳು ಪಕ್ಷಗಾರರಾಗಿರುತ್ತಾರೆ ಎಂದು ಹೇಳಿರುತ್ತೇನೆ . ಸದರಿ ಅರ್ಜಿಯನ್ನು ಮಾನ್ಯ Arbitrator ರವರು ಅಲೋ ಮಾಡಿರಲಿಲ್ಲ. Arbitration ವಿಚಾರಣೆ ನ್ಯಾಯಾಧೀಶರಾದ ಶ್ರೀ ಆರ್ ಗುರುರಾಜನ್ ರವರ ಮುಂದೆ ನಡೆಯಿತು ಎಂದರೆ ಸರಿ .

ಅದರಲ್ಲಿ ಅವರು ತೀರ್ಪು ನೀಡಿದ್ದಾರೆ ಎಂದರೆ ಸರಿ . ಸದರಿ ತೀರ್ಪು ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು ಪಡಿಸಿದ್ದೇನೆ . ಸದರಿ ತೀರ್ಪಿನ ಪ್ರತಿಯನ್ನು 2016 ರ ಬೇರೆ ದಾವೆಗಳು ಇದ್ದು ಆ ಒಂದು ದಾವೆಯಲ್ಲಿ ಹಾಜರುಪಡಿಸಿದ್ದೇನೆ .

ಮಾನ್ಯ Arbitrator ರವರು ಅವರ ತೀರ್ಪಿನಲ್ಲಿ ನಿಮ್ಮ ಜಿಪಿಎ , ಜೆಡಿಎ ಗಳು ಆದ ನಂತರ ಸಪ್ಲಿ ಮೆಂಟರಿ ಅಗ್ರಿಮೆಂಟ್ ಮತ್ತು ಎಂ ಓ ಯು ಗಳು , ಸಪ್ಲಿ ಮೆಂಟರಿ ಅಗ್ರಿಮೆಂಟ್ ಮತ್ತು ಎಂ ಓ ಯು ಗಳು ಊರ್ಜಿತವಾಗುತ್ತವೆ ಎಂದು ತೀರ್ಮಾನ ಮಾಡಿ ಆ ಸಂಬಂಧ ಕಾರಣಗಳನ್ನು ಸಹ ನೀಡಿದ್ದಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಆ ತೀರ್ಪಿನ ಮೇಲೆ ಮೇಲ್ಮನವಿ ಹೋಗಿದ್ದೇವೆ ಎಂದು ಹೇಳುತ್ತಾರೆ . ಸಪ್ಲಿ ಮೆಂಟರಿ ಅಗ್ರಿಮೆಂಟ್ ನಲ್ಲಿ ನೀವು ಯಾವ ರೀತಿ ಸ್ವತ್ತುಗಳನ್ನು ವಿಭಜನೆ ಮಾಡಿಕೊಂಡಿದ್ದೇವೆ ಎಂದು ನಮೂದಿಸಿದ್ದೀರೂ ಅದನ್ನು ಎಂ ಓ ಯು ನಲ್ಲಿ ವ್ಯತ್ಯಾಸವಾಗಿತ್ತು ಎಂದರೆ ಸರಿಯಲ್ಲ. ಸಪ್ಲಿ ಮೆಂಟರಿ ಅಗ್ರಿಮೆಂಟ್ ಆದ ನಂತರ ಎಂ ಓ ಯು ಮಾಡಿಕೊಂಡಿದ್ದೀರಿ ಎಂದರೆ ಸರಿ . ನಿಪಿ 5 ಕ್ಲಾಸ್ (2 ಮತ್ತು 3) ರ ಪ್ರಕಾರ 8,000 ಚದರಡಿ ಏರಿಯಾವನ್ನು ನೀವು ಡೆವಲಪರ್ ಗೆ ಬಿಟ್ಟು ಕೊಟ್ಟು ಅದನ್ನು ಮಾರ್ಕೆಟಿಂಗ್ ಮಾಡಿ ಮಾರತಕ್ಕದ್ದು ಎಂದು ನೀವು ಒಪ್ಪಿ ಕೊಂಡಿದ್ದೀರಿ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದು

ನನ್ನ ಷೇರ್ ನಲ್ಲಿ ಎಂದುಹೇಳುತ್ತಾರೆ . ಎಂ ಓ ಯು ನಲ್ಲಿ ನಿಪಿ 5 ರ ಕ್ಲಾಸ್ (2 ಮತ್ತು 3) ರಂತೆ ವ್ಯತ್ಯಾಸವಾಗಿತ್ತು ಮತ್ತು ತಿದ್ದುಪಡಿಯಾಗಿತ್ತು ಎಂದರೆ ಸರಿಯಲ್ಲ. ಸಪ್ಲಿ ಮೆಂಟರಿ ಅಗ್ರಿಮೆಂಟ್ ನಲ್ಲಿ ಇದ್ದ ವಿಭಜನೆಯ ಜೊತೆಯಲ್ಲಿ ಇನ್ನೂ 8,000 ಚದುರಡಿ ಜಾಗವನ್ನು ಅವರಿಗೆ ಮಾರಾಟ ಮಾಡಲು ಎಂ ಓ ಯು ನಲ್ಲಿ ನೀಡಿದ್ದೀರಿ ಎಂದರೆ ಸರಿಯಲ್ಲ.

ಆರ್ ಆರ್ ರಿಲಿಗೇರ್ ಪಿನ್ ವೆಸ್ಟ್ ಕಂಪನಿಯಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಹೌದು . ನಾನು 6 ಕೋಟಿ 80 ಲಕ್ಷ ಹಣ ಸಾಲ ಪಡೆದುಕೊಂಡಿದ್ದೆನು . ಸಾಲ ತೀರಿಸುವ ಉದ್ದೇಶಕ್ಕಾಗಿ ಹೆಚ್ಚಿ ನ 8,000 ಚದುರಡಿ ಜಾಗವನ್ನು 4 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಲು ಕೊಟ್ಟಿದ್ದೀರಿ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದು ನನ್ನ ಷೇರಿನಲ್ಲಿರುವ 8,000 ಚದುರಡಿ ಜಾಗ ಎಂದು ಹೇಳುತ್ತಾರೆ . ಹಾಗಾದರೆ ಸಪ್ಲಿ ಮೆಂಟರಿ ಅಗ್ರಿಮೆಂಟ್ ನಲ್ಲಿ ನಿಮ್ಮ ಭಾಗಕ್ಕೆ ಬಂದಿರುವ ಷೇರ್ ಎಂದರೆ ಸರಿ. ಅದನ್ನು 4 ನೇ ಪ್ರತಿವಾದಿ ನಿಮ್ಮ ಒಪ್ಪಿಗೆ ಮೇರೆಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಜೆಡಿಎ , ಜಿಪಿಎ , ಸಪ್ಲಿ ಮೆಂಟರಿ ಅಗ್ರಿಮೆಂಟ್ ಮತ್ತು ಎಂ ಓ ಯು ಎಲ್ಲವನ್ನು ಮಾಡಿಕೊಟ್ಟು 4 ನೇ ಪ್ರತಿವಾದಿಗೆ ಮಾರಾಟ ಮಾಡುವ

ಅಧಿಕಾರವನ್ನು ಕೊಟ್ಟು ಈಗ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಪ್ರತಿವಾದಿಯ ವಿರುದ್ದ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.